ದಿಃ 03.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಪಿ.ಎಂ., ವಕೀಲರಿಂದ ಅರ್ಜಿದಾರರ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ನನ್ನ ಹೇಳಿಕೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ಮಹಜರ್ ನ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, ಅಂತಿಮ ವರದಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, ಗಣೇಶ್ ರವರ ಹೇಳಿಕೆಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು.

   (ಮುಂದುವರೆದ ಮುಖ್ಯ ವಿಚಾರಣೆಗೆ ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 24.03.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಪಿ.ಎಂ., ವಕೀಲರಿಂದ ಅರ್ಜಿದಾರರ ಪರವಾಗಿ</u>

3. Prescription ಅನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು ಗುರುತಿಸಲಾಯಿತು, ಫಾದರ್ ಮುಲ್ಲರ್ ಆಸ್ಪತ್ರೆಯಿಂದ ನೀಡಿದ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.8 ಎಂದು ಗುರುತಿಸಲಾಯಿತು, ಇ.ಸಿ.ಜಿ ಯನ್ನು ಹಾಜರು ಮಾಡಿದ್ದು ನಿ.ಪಿ.9 ಎಂದು ಗುರುತಿಸಲಾಯಿತು, ವೆನ್ಲಾಕ್ ಆಸ್ಪತ್ರೆಯಿಂದ ನೀಡಿದ ಎರಡು ಹೊರರೋಗಿ ಚೀಟಿಗಳನ್ನು ಹಾಜರು ಮಾಡಿದ್ದು ನಿ.ಪಿ.10 ಮತ್ತು 11 ಎಂದು ಗುರುತಿಸಲಾಯಿತು, ಮೆಡಿಕಲ್ ಬಿಲ್ಲುಗಳನ್ನು ಹಾಜರು ಮಾಡಿದ್ದು ನಿ.ಪಿ.12 ರಿಂದ ನಿ.ಪಿ.17 ಎಂದು ಗುರುತಿಸಲಾಯಿತು. ಅಂಬುಲೆನ್ಸ್ ಬಿಲ್ಲನ್ನು ಹಾಜರು ಮಾಡಿದ್ದು ನಿ.ಪಿ.18 ಎಂದು ಗುರುತಿಸಲಾಯಿತು, X-Ray ಗಳನ್ನು ಹಾಜರು ಮಾಡಿದ್ದು ನಿ.ಪಿ.19 ರಿಂದ ನಿ.ಪಿ.30 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಶ್ರೀ ಡಿ.ಎಸ್ ವಕೀಲರಿಂದ **1** ನೇ ಎದುರುದಾರರ ಪರವಾಗಿ</u>

4. ನಾನು 1 ನೇ ಎದುರುದಾರರ ತೋಟದಲ್ಲಿ ಕೆಲಸ ಮಾಡುತ್ತಿದ್ದೆನು ಎಂದು ತೋರಿಸಿದ ಬಗ್ಗೆ ದಾಖಲಾತಿಯನ್ನು ಹಾಜರು ಮಾಡಿರುವುದಿಲ್ಲ. 1 ನೇ ಎದುರುದಾರರು ನನಗೆ ಸಂಭಳ ಪಾವತಿ ಮಾಡಿದ ಬಗ್ಗೆ ನನ್ನ ಬಳಿ ದಾಖಲಾತಿ ಇರುತ್ತದೆ. ಸದರಿ ದಾಖಲಾತಿಯನ್ನು ನಾನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಸೋಮಯ್ಯ ಮೇಸ್ತ್ರಿ ಎಂದರೆ ನನ್ನ ಊರಿನವರಾಗಿರುತ್ತಾರೆ. ನನಗೆ ಈಗ 48 ವರ್ಷ ವಯಸ್ಸಾಗಿರುತ್ತದೆ. 48 ವಯಸ್ಸಿನಲ್ಲಿ ಮರಗಸಿ ಕೆಲಸ ಮಾಡಲು ಸಾಧ್ಯವಿರುವುದಿಲ್ಲ ಎಂದರೆ ಸರಿಯಲ್ಲ. ಈ ವಯಸ್ಸಿನಲ್ಲಿ ಮರ ಹತ್ತಿ ಮರಗಸಿ ಕೆಲಸ ಮಾಡಲು ಸಾಧ್ಯವಿರುವುದಿಲ್ಲ ಎಂದರೆ ಸರಿ. ಮರದಿಂದ ಜಾರಿ ಬೀಳುವುದು ನನ್ನ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಸರಿಯಾಗಿ ಮರಗಸಿ ಕೆಲಸ ಮಾಡಲು ಗೊತ್ತಿರುತ್ತಿದ್ದರೆ ನಾನು ಮರದಿಂದ

ಜಾರಿ ಬೀಳುತ್ತಿರಲಿಲ್ಲ ಎಂದರೆ ಸರಿಯಲ್ಲ. ಈ ವಯಸ್ಸಿನಲ್ಲಿ ಮರಗಸಿ ಕೆಲಸ ಮಾಡಲು ಸಾಧ್ಯವಿರದೇ ಇರುವುದರಿಂದ ನನ್ನ ತಪ್ಪಿನಿಂದಲೇ ನಾನು ಮರದಿಂದ ಬಿದ್ದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದಲೇ ನಾನು ಮರದಿಂದ ಬಿದಿದ್ದರು ಸಹ 1 ನೇ ಎದುರುದಾರರು ನನ್ನನ್ನು ಮಾನವೀಯತೆ ದೃಷ್ಟಿಯಿಂದ ಆಸ್ಪತ್ರೆಗೆ ದಾಖಲು ಮಾಡಿರುತ್ತಾರೆ ಎಂದರೆ ಸರಿಯಲ್ಲ. ತೋಟದಿಂದ ನನ್ನನ್ನು ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಬಂದಿರುತ್ತಾರೆ. ಸದರಿ ಅಂಬುಲೆನ್ಸ್ ಅನ್ನು 1 ನೇ ಎದುರುದಾರರೇ ತರಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ನನಗೆ ಚಿಕಿತ್ಸೆ ಪಡೆಯಲು ಮಂಗಳೂರಿಗೆ ಹೋಗಲು ಮತ್ತು ಚಿಕಿತ್ಸೆಗೆ ಹಣ ನೀಡಿದ್ದರು ಎಂದರೆ ಸರಿಯಲ್ಲ. ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಆರ್ಥಿಕ ಸಮಸ್ಯೆ ಇದ್ದ ಕಾರಣ ನಾನು ಶಸ್ತ್ರ ಚಿಕಿತ್ಸೆ ಮಾಡಿಸಿರುವುದಿಲ್ಲ, ವೆನ್ಲಾಕ್ ಆಸ್ಪತ್ರೆಯು ಸರ್ಕಾರಿ ಆಸ್ಪತ್ರೆ ಎಂದರೆ ಸರಿ. ನಾನು ಬಿ.ಪಿ.ಎಲ್ ಪಡಿತರ ಚೀಟಿ ಹೊಂದಿರುತ್ತೇನೆ ಎಂದರೆ ಸರಿ. ಪಡಿತರ ಚೀಟಿ ಹೊಂದಿರುವವರಿಗೆ ವೆನ್ಲಾಕ್ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಇರುತ್ತದೆ ಎಂದರೆ ಸರಿಯಲ್ಲ. ಉಚಿತ ಚಿಕಿತ್ಸೆಯನ್ನು ನೀಡದ ಬಗ್ಗೆ ನಾನು ಆಸ್ಪತ್ರೆಯಲ್ಲಿ ವಿಚಾರಿಸಿರುವುದಿಲ್ಲ. ನಾನು ಅಪಘಾತದ ಮೊದಲು ಆರೋಗ್ಯವಾಗಿದ್ದು, ದಷ್ಟಪುಷ್ಟವಾಗಿದ್ದು ಈಗಲು ಅದೇ ರೀತಿ ಇರುತ್ತೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದಾಗಿ ಕೂರಲು ಮತ್ತು ನಿಲ್ಲಲು ಆಗುವುದಿಲ್ಲ ಮತ್ತು ಕೆಲಸ ಮಾಡಲು ಆಗುವುದಿಲ್ಲ ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. 10 ವರ್ಷಗಳ ಹಿಂದೆ ಇದೇ ರೀತಿ ಮರದಿಂದ ಬಿದ್ದು ಗಾಯವಾಗಿ ಪ್ರಕರಣ ದಾಖಲು ಮಾಡಿ ಪರಿಹಾರ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೈಗೆ ಗಾಯವಾದ ಕಾರಣ ಪ್ರಕರಣ ದಾಖಲು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಹಿಂದೆ ಪ್ರಕರಣದಲ್ಲಿ ನನಗೆ ಕೈಗೆ ಗಾಯವಾದ ಕಾರಣ ನನಗೆ ಆ ನಂತರ ಮರ ಹತ್ತಿ ಮರಗಸಿ ಕೆಲಸ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ನನಗೆ ನಡೆದಾಡಲು ತೊಂದರೆ ಇರುತ್ತದೆ. ನನಗೆ ಸದರಿ ಅಪಘಾತದಿಂದ

ಮಾನಸಿಕ, ದೈಹಿಕ ತೊಂದರೆಯಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ನಂತರ ನನಗೆ ಚಿಕಿತ್ಸೆ ಪಡೆಯುವ ಸಮಯದಲ್ಲಿ ಯಾವುದೇ ಆಧಾಯ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿಗೆ ನಾವು ಒಟ್ಟು 3 ಜನ ಗಂಡು ಮಕ್ಕಳು ಇರುತ್ತೇವೆ. ನನ್ನ ಸಹೋದರರು ನನ್ನ ಅಣ್ಣಂದಿರು ಆಗಿರುತ್ತಾರೆ. ನನ್ನ ಮತ್ತು ನನ್ನ ಸಹೋದರರ ಸಂಬಂಧ ಅನೋನ್ಯವಾಗಿರುವುದಿಲ್ಲ. ನನ್ನ ತಂದೆ ತಾಯಿಯು ಮೃತಪಟ್ಟು 3 ವರ್ಷ ಆಗಿರುತ್ತದೆ. ನನ್ನ ತಂದೆ ತಾಯಿಯನ್ನು ನಾನೇ ನೋಡಿಕೊಳ್ಳುತ್ತೇನೆ ಎಂದು ಅರ್ಜಿಯಲ್ಲಿ ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ 30 ಸಾವಿರ ರೂಪಾಯಿ ಸಂಬಳ ಇರುವ ಬಗ್ಗೆ ಯಾವುದೇ ದಾಖಲಾತಿಯನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿ. ನನಗೆ ಶಾಶ್ವತ ಅಂಗನ್ಯೂನತೆ ಉಂಟಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಬುಜಕ್ಕೆ ಸ್ಟೀಲ್ ರಾಡ್ ಹಾಕಿರುತ್ತಾರೆ ಮತ್ತು ಅದನ್ನ ತೆರೆಯಲು ಇನ್ನೊಂದು ಶಸ್ತ್ರ ಚಿಕಿತ್ಸೆ ಆಗಬೇಕು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರಗಸಿ ಕೆಲಸ ಮಾಡಲು ಏಣಿ ಕೊಡುತ್ತಾರೆ ಎಂದರೆ ಸರಿ. ಮರ ಹತ್ತುವುದು ಮತ್ತು ಮರ ಕಡಿಯುವುದು ಬೇರೆ ಬೇರೆ ಎಂದರೆ ಸರಿ. ನಾನು ಸರಿಯಾಗಿ ಮುನ್ನೆಚ್ಚರಿಕೆ ತೆಗೆದುಕೊಳ್ಳುತ್ತಿದ್ದರೆ ಸದರಿ ಅಪಘಾತವಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಮರಗಸಿ ಕೆಲಸ ಮಾಡುವ ಸಮಯದಲ್ಲಿ ನಾನು ಚಪ್ಪಲಿ ಹಾಕುವುದಿಲ್ಲ. ಸದರಿ ಅಪಘಾತಕ್ಕೆ 1 ನೇ ಎದುರುದಾರರ ನಿರ್ಲಕ್ಷ್ಯ ಕಾರಣ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಾನು ಸೋಮಯ್ಯ ಮೇಸ್ತ್ರಿ ರವರ ಜೊತೆ ಕೆಲಸ ಮಾಡುತ್ತಿದ್ದೆನು ಎಂದರೆ ಸರಿ. ನನಗೆ ಸಂಬಳವನ್ನು ಸೋಮಯ್ಯ ಮೇಸ್ತ್ರಿ ರವರೇ ಕೊಡುತ್ತಿದ್ದರು ಎಂದರೆ ಸರಿ. ನನಗೆ ಮತ್ತು 1 ನೇ ಎದುರುದಾರರಿಗೆ ಮಾಲಿಕ ಮತ್ತು ನೌಕರನ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ನನಗೆ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆಯನ್ನು ನೀಡಿರುವುದರಿಂದ ನನ್ನ ಅರ್ಜಿಯಲ್ಲಿ ಹೇಳಿದಂತೆ ರೂ.1,50,000-00

ಚಿಕಿತ್ಸೆಗೆ ಖರ್ಚು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮತ್ತು 1 ನೇ ಎದುರುದಾರರ ನಡುವೆ ಮಾಲಿಕ ಮತ್ತು ನೌಕರ ಸಂಬಂಧ ಇರದೇ ಇರುವುದರಿಂದ 1 ನೇ ಎದುರುದಾರರು ಯಾವುದೇ ಪರಿಹಾರ ಮತ್ತು ಬಡ್ಡಿಯನ್ನು ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು ಅವರ ತೋಟಕ್ಕೆ ಮರಗಸಿ ಕೆಲಸ ಮಾಡುವ ಉದ್ದೇಶಕ್ಕಾಗಿ ವಿಮಾ ಸೌಲಭ್ಯ ಮಾಡಿದ್ದರು ಎಂದರೆ ಸರಿ. ಅಪಘಾತದ ಸಮಯದಲ್ಲಿ 1 ನೇ ಎದುರುದಾರರ ತೋಟಕ್ಕೆ ಮಾಡಿರುವ ವಿಮಾ ಸೌಲಭ್ಯವು ಚಾಲ್ತಿಯಲ್ಲಿ ಇದುದ್ದರಿಂದ ನಾನು 2 ನೇ ಎದುರುದಾರರಿಂದ ಮಾತ್ರ ಪರಿಹಾರ ಪಡೆಯಲು ಬಾಧ್ಯಸ್ಥನು ಎಂದರೆ ಸರಿಯಲ್ಲ. 1 ನೇ ಎದುರುದಾರರು ನನಗೆ ಯಾವುದೇ ರೀತಿ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ದಾಖಲಾತಿಗಳನ್ನು ಪರಿಹಾರ ಪಡೆಯುವ ಉದ್ದೇಶದಿಂದ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ನಾನು ದಾಖಲಾದ ಬಗ್ಗೆ discharge summary ಯನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಆಸ್ಪತ್ರೆಯಿಂದ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ರೂ.7,300-00 ಚಿಕಿತ್ಸಾ ವ್ಯಚ್ಚದ ಬಿಲ್ಲನ್ನು ಹೊರತುಪಡಿಸಿ ಬೇರೆ ಯಾವುದೇ ಚಿಕಿತ್ಸಾ ವ್ಯಚ್ಚದ ಬಿಲ್ಲನ್ನು ಹಾಜರು ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಿ.ಪಿ.15 ಬಿಲ್ಲು ಕೈ ಬರವಣಿಗೆಯಲ್ಲಿ ಇರುತ್ತದೆ, ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ಯಾವುದೇ ಬಿಲ್ಲನ್ನು ಕೈಬರವಣಿಗೆಯಲ್ಲಿ ನೀಡುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.15 ಬಿಲ್ಲಿನಲ್ಲಿ ಆಸ್ಪತ್ರೆಯ ಮೊಹರು ಇರುವುದಿಲ್ಲ ಎಂದರೆ ಸರಿ. ಫಾದರ್ ಮುಲ್ಲರ್ ಆಸ್ಪತ್ರೆಯಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಆಗಿರುವುದಿಲ್ಲ ಎಂದರೆ ಸರಿ. ನಿ.ಪಿ.15 ರಲ್ಲಿ ನಮೂದಾಗಿರುವ ರೂ.60,000-00 ಯನ್ನು ಫಾದರ್ ಮುಲ್ಲರ್ ಆಸ್ಪತ್ರೆಯಿಂದ ವಾಪಸ್ಸು ನೀಡಿರುವುದಿಲ್ಲ. ನಿ.ಪಿ.15 ಬಿಲ್ಲಿನಲ್ಲಿ ನಮೂದಾಗಿರುವ ರೂ.60,000-00 ಮರುಪಾವತಿಸುವಂತೆ ನಾನು ನನ್ನ ವಕೀಲರ ಮೂಲಕ ನೋಟೀಸು ನೀಡಿರುವುದಿಲ್ಲ. ನಾನು ಮುಂಗಡ ಹಣ ಪಾವತಿ

ಮಾಡಿರುವ ರೂ.60,000-00 ವನ್ನು ವಾಪಸ್ಸು ನೀಡುವಂತೆ ಆಸ್ಪತ್ರೆಯಲ್ಲಿ ಕೇಳಿದ್ದರು ಸಹ ಆಸ್ಪತ್ರೆಯವರು ಪಾವಸ್ಸು ನೀಡಿರುವುದಿಲ್ಲ. ದಿಃ 12.10.2023 ರಂದೇ ನನಗೆ ನಿ.ಪಿ.15 ರಂತೆ ಮುಂಗಡ ರೂ.60,000-00 ಯನ್ನು ಕಟ್ಟಿದ್ದರು ಸಹ ನಿ.ಪಿ.17 ರ ಪ್ರಕಾರ ರೂ.7300-00 ಗೆ discharge bill ಅನ್ನು ನೀಡಿರುತ್ತಾರೆ ಎಂದರೆ ಸಾಕ್ಷಿಯು ಬಿಲ್ಲು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ನಿ.ಪಿ.17 ಬಿಲ್ಲು ಕಂಪ್ಯೂಟರ್ ನಲ್ಲಿ ನೀಡಿರುವ ಬಿಲ್ಲು ಎಂದರೆ ಸರಿ. ನಿ.ಪಿ.15 ಬಿಲ್ಲನ್ನು ನಾನು ಈ ಪ್ರಕರಣವನ್ನು ದಾಖಲು ಮಾಡಲು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಅಂಗನ್ಯೂನತೆ ಆಗಿರುವ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ. ನಾನು ಹಾಜರು ಮಾಡಿರುವ ದಾಖಲಾತಿಗಳಲ್ಲಿ ನಿ.ಪಿ.17 ರಂತೆ ರೂ.7300-00 ಅನ್ನು ಹೊರತು ಪಡಿಸಿ ನನಗೆ ಬೇರೆ ಯಾವುದೇ ಚಿಕಿತ್ಸಾ ವ್ಯಚ್ಚ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಶಸ್ತ್ರ ಚಿಕಿತ್ಸೆ ಆದ ಬಗ್ಗೆ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ವೆನ್ಲಾಕ್ ಆಸ್ಪತ್ರೆಯಲ್ಲಿ discharge ಆದ ಬಗ್ಗೆ discharge summary ಯನ್ನು ಹಾಜರು ಮಾಡದೇ ಇರುವುದರಿಂದ ನಾನು ಸದರಿ ಆಸ್ಪತ್ರೆಯಲ್ಲಿ ದಾಖಲಾಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು ನನಗೆ ಅರ್ಜಿಯಲ್ಲಿ ಕೇಳಿದಂತೆ ಯಾವುದೇ ಪರಿಹಾರ ನೀಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಎಂ.ವೈ.ಎಸ್ ವಕೀಲರಿಂದ 2 ನೇ ಎದುರುದಾರರ ಪರವಾಗಿ

6. ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿರುತ್ತಾರೆ ನೀಡಲಾಗಿದೆ.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ